# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 02.07.2022 ರಂದು 12:00 ಗಂಟೆಗೆ ಸರ್.ಎಂ ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2021–22ನೇ ಸಾಲಿನ ಎರಡನೇ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಸಿಂಡಿಕೇಟ್ ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | **ಪ್ರೊ. ಕೇಶವ, ಮಾನ್ಯ ಕುಲಪತಿಗಳು (ಪ್ರಭಾರ)** | ಅಧ್ಯಕ್ಷರು |
| 2. | **ಪ್ರೊ. ಕೇಶವ, ಹಿರಿಯ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ** | ಸದಸ್ಯರು |
| 3. | **ಡಾ. ಕೆ ಸಿ ಜಯಸ್ವಾಮಿ**<br>ಪ್ರಾಂಶುಪಾಲರು, ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು<br>ಬಿ.ಹೆಚ್ ರಸ್ತೆ, ತುಮಕೂರು | ಸದಸ್ಯರು |
| 4. | **ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.**<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು–572102. | ಸದಸ್ಯರು |
| 5. | **ಶ್ರೀ ಪ್ರಸನ್ನಕುಮಾರ್**<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009. | ಸದಸ್ಯರು |
| 6. | **ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ**<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು–560072. | ಸದಸ್ಯರು |
| 7. | **ಶ್ರೀ ರಾಜು**<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ, ತಿಪಟೂರು–572201. ತುಮಕೂರು ಜಿಲ್ಲೆ. | ಸದಸ್ಯರು |
| 8. | **ಶ್ರೀ ಟಿ.ಡಿ. ವಿನಯ್,**<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ, ತುಮಕೂರು–572105. | ಸದಸ್ಯರು |
| 9. | **ಪ್ರೊ. ಪಾಟೀಲ್ ಮಲ್ಲಿಕಾರ್ಜುನ. ಬಿ,**<br>ಪ್ರಾಧ್ಯಾಪಕರು. ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ. | ಸದಸ್ಯರು |
| 10. | **ಕುಲಸಚಿವರು (ಪರೀಕ್ಷಾಂಗ)** | ಸದಸ್ಯರು |
| 11. | **ಹಣಕಾಸು ಅಧಿಕಾರಿಗಳು** | ವಿಶೇಷ ಆಹ್ವಾನಿತರು |
| 12. | **ಕುಲಸಚಿವರು** | ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು**

| | | |
|---|---|---|
| 1 | **ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು** | ಸದಸ್ಯರು |
| 2 | **ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | ಸದಸ್ಯರು |
| 3 | **ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | ಸದಸ್ಯರು |



02/07/22

| | | |
|---|---|---|
| 4 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6. | ಡಾ. ಎಂ.ಎಸ್. ಭವ್ಯ<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್, ಬೆಂಗಳೂರು–560064. | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ:02.07.2022ರ ಶನಿವಾರ 12:00 ಕ್ಕೆ ನಡೆದ 2021–22ನೇ ಸಾಲಿನ ಎರಡನೇ ವಿಶೇಷ ಸಿಂಡಿಕೇಟ್ ಸಭೆಗೆ ಎಲ್ಲಾ ಸದಸ್ಯರುಗಳನ್ನು ಹಾಗೂ ಹಿರಿಯ ಪ್ರಾಧ್ಯಾಪಕರಡಿಯಲ್ಲಿ ಸರ್ಕಾರದಿಂದ ನಾಮನಿರ್ದೇಶಿತಾದ ಪ್ರೊ, ಪಾಟೀಲ್ ಮಲ್ಲಿಕಾರ್ಜುನ್ ಬಿ ಇವರನ್ನು ಆತ್ಮೀಯವಾಗಿ ಸಭೆಗೆ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಮಾನ್ಯ ಕುಲಸಚಿವರು ಕಾರ್ಯಸೂಚಿಗಳ ಮಂಡಿಸಿ, ಈ ಬಗ್ಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| • | ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಬಿ.ಕಾಂ. ಪದವಿಯ ಪ್ರವೇಶ ಮಿತಿ ಹೆಚ್ಚಳವನ್ನು ಮಾಡುವಂತೆ ಶ್ರೀ ಟಿ.ಡಿ. ವಿನಯ್, ರವರು ಪ್ರಸ್ತಾಪಿಸಿದರು, ಈ ಸಂಬಂಧ ಚರ್ಚಿಸಿದ ಸಭೆಯು ಪ್ರಾಂಶುಪಾಲರು ಸಲ್ಲಿಸುವ ಮನವಿಯ ಮೇರೆಗೆ, ಹಾಲಿ ಇರುವ ಪ್ರವೇಶ ಮಿತಿಗೆ ಶೇಕಡ 20% ರಷ್ಟು ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. | | |
| | | ಪರೀಕ್ಷಾ ವಿಭಾಗ | |
| 1. | 2021–22.ವಿ.ಸಿಂ.02<br>ಪ.ವಿ–01 | ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ, ರ‍್ಯಾಂಕ್ ವಿಜೇತರ ಪಟ್ಟಿ, ಸುವರ್ಣಲೇಪಿತ ಬೆಳ್ಳಿ ಪದಕ & ನಗದು ಬಹುಮಾನ ವಿಜೇತರ ಪಟ್ಟಿ, ಪಿಹೆಚ್.ಡಿ ಹಾಗೂ ಡಿ.ಲಿಟ್ ಪದವಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯ ಕುರಿತು. | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಹದಿನೈದನೇ ವಾರ್ಷಿಕ ಘಟಿಕೋತ್ಸವಕ್ಕೆ ಪರಿಗಣಿಸಲು ಅನುಮೋದಿಸಿತು ಹಾಗೂ ಈ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2. | 2021–22.ವಿ.ಸಿಂ.02<br>ಪ.ವಿ–02 | Prof. RADHAKRISHNA K E ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ಘೋಷಿಸಿ ಅಧಿಸೂಚನೆ ಹೊರಡಿಸಿರುವ ಕುರಿತು. | Prof. RADHAKRISHNA K E ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ಕುರಿತು ಚರ್ಚಿಸಿದ ಸಭೆಯು ಈ ಕುರಿತು ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಅನುಮೋದಿಸಿತು. |
| 3. | 2021–22.ವಿ.ಸಿಂ.02<br>ಪ.ವಿ–03 | ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯು.ಯು.ಸಿ.ಎಂ.ಎಸ್) ತಂತ್ರಾಶದಲ್ಲಿ ಪರೀಕ್ಷಾ ನಂತರದ ಕಾರ್ಯಗಳಿಗೆ ಅಳವಡಿಸಬೇಕಾದ ನಿಯಮಗಳ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಪ್ರಸ್ತುತ, ರಾಷ್ಟ್ರೀಯ ಶಿಕ್ಷಣ ನೀತಿ ವಿನಿಯಮ ಹಾಗೂ ಪರೀಕ್ಷಾ ಅಧಿಶಾಸನದಲ್ಲಿ ಉಲ್ಲೇಖಿಸಿರುವಂತೆ ಅಳವಡಿಸಲ್ಪಟ್ಟ ನಿಯಮಗಳನ್ನು ಅನುಮೋದಿಸಿತು ಹಾಗೂ ಸದರಿ ವಿನಿಯಮದಲ್ಲಿ ಉಲ್ಲೇಖಿಸಲ್ಪಡದ ವಿಚಾರಗಳನ್ನು ಪರೀಕ್ಷಾ ಕಾರ್ಯಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |



2/7/22

| | | | |
|---|---|---|---|
| **ಕಾಲೇಜು ಅಭಿವೃದ್ಧಿ ಪರಿಷತ್ತು** | | | |
| 4. | 2021–22.ವಿ.ಸಿಂ.02 ಕಾ.ಅ.ಪ–01 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ ತುಮಕೂರು ಜಿಲ್ಲೆ ಈ ಕಾಲೇಜಿನ ಸ್ವಾಯತ್ತ ಸ್ಥಾನಮಾನದ ವಿಸ್ತರಣೆ ಸಂಬಂಧ ಯು.ಜಿ.ಸಿ ಕೋರಿರುವಂತೆ ನಿರಾಕ್ಷೇಪಣಾ ಪ್ರಮಾಣ ಪತ್ರ (N.O.C) ನೀಡುವಂತೆ ಕೋರಿರುವ ಕುರಿತು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ ಈ ಕಾಲೇಜಿನ ಸ್ವಾಯತ್ತತೆ ಸ್ಥಾನಮಾನದ ಕುರಿತು ಚರ್ಚಿಸಿದ ಸಭೆಯು, ಪ್ರಸ್ತುತ ಇರುವ ಯು.ಜಿ.ಸಿ ನಿಯಮದ ಕುರಿತು ಅವಲೋಕಿಸಿ, ಕಾಲೇಜು ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸ್ವಾಯತ್ತ ಸ್ಥಾನಮಾನದ ವಿಸ್ತರಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ (N.O.C) ನೀಡುವಂತೆ ತೀರ್ಮಾನಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು ಹಾಗೂ ಸದರಿ ಕಾಲೇಜಿನವರಿಂದ ಯು.ಜಿ.ಸಿ. ನಿಯಮದಂತೆ ಸ್ವಾಯತ್ತತೆ ಸ್ಥಾನಮಾನದ ಮಾನದಂಡಗಳನ್ನು ಪೂರೈಸುವುದಾಗಿ ಒಂದು ಮುಚ್ಚಳಿಕೆ ಪತ್ರವನ್ನು ಪಡೆಯುವಂತೆ ಸಭೆಯು ತೀರ್ಮಾನಿಸಿತು. |
| **ಶೈಕ್ಷಣಿಕ ವಿಭಾಗ** | | | |
| 5. | 2021–22.ವಿ.ಸಿಂ.02 ಶೈ.ವಿ–01 | ವಿವಿಧ ಸ್ನಾತಕ ಪದವಿಗಳ ಪ್ರವೇಶಮಿತಿ ಹೆಚ್ಚಳ ಮಾಡಿರುವ ಕ್ರಮದ ಸ್ಥಿರೀಕರಣ ಕುರಿತು. | ಸದರಿ ವಿಷಯದ ಕುರಿತು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸ್ನಾತಕ ಪದವಿ ಪ್ರವೇಶಮಿತಿ ಹೆಚ್ಚಳ ಮಾಡಿರುವ ಕ್ರಮವನ್ನು ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ ಸಭೆಯು ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 6. | 2021–22.ವಿ.ಸಿಂ.02 ಸಾ&ಅ–01 | ತುಮಕೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ಡಾ. ಎಂ.ಕೆ ಶಿವಾನಂದ ಸ್ಮರಣಾರ್ಥ ಚಿನ್ನದ ಪದಕ ದತ್ತಿನಿಧಿ ಸ್ವೀಕರಿಸಿರುವ ಬಗ್ಗೆ ಸ್ಥಿರೀಕರಣ ಕುರಿತು. | ಡಾ. ಎಂ.ಕೆ ಶಿವಾನಂದ ಸ್ಮರಣಾರ್ಥ ಚಿನ್ನದ ಪದಕ ದತ್ತಿನಿಧಿ ಸ್ವೀಕರಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| **ಖರೀದಿ ಕೋಶ** | | | |
| 7. | 2021–22.ವಿ.ಸಿಂ.02 ಖ.ಕೋ–01 | ದಿನಾಂಕ 05.07.2022ರಂದು ತುಮಕೂರು ವಿಶ್ವವಿದ್ಯಾನಿಲಯದ 15ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸುವ ಅತಿಥಿಗಳಿಗೆ, ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಆಹಾರ ಪೂರೈಕೆಗಾಗಿ ಅರ್ಹ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣದ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಶ್ರೀ ಸಿ.ಎಸ್ ಮಹೇಶ್ ಎಸ್.ಎಲ್.ಎನ್ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಘಟಿಕೋತ್ಸವದ ಸಂಬಂಧ ಆಹಾರ ಸರಬರಾಜು ಮಾಡಲು ನೀಡಿರುವ ಆದೇಶದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು ಹಾಗೂ ಸದರಿ ಸಂಸ್ಥೆಯವರು ಸಲ್ಲಿಸುವ ಹುಂಡಿಯ ಮೊತ್ತದ ಪಾವತಿ ಕುರಿತು ನಿಯಮಾನುಸಾರ ಪಾವತಿಸಲು ಕ್ರಮ ಕೈಗೊಳ್ಳುವಂತೆ ನಿರ್ಣಯಿಸಿತು.<br><br>ಮುಂದುವರೆದು, ಪ್ರಸ್ತುತ ಸರಬರಾಜು ಮಾಡುತ್ತಿರುವ ಸಂಸ್ಥೆಗೆ 4ಜಿ ವಿನಾಯಿತಿ ಇರುವುದರಿಂದ, ಹೆಚ್ಚುವರಿಯಾಗಿ 500 ಜನಕ್ಕೆ ಆಹಾರ ಪೂರೈಸಲು ತಿಳಿಸುವಂತೆ ಸಭೆಯು ತೀರ್ಮಾನಿಸಿತು. |



2/7/22

02/07/22

| | | | |
|---|---|---|---|
| **ಹೆಚ್ಚುವರಿ ಕಾರ್ಯಸೂಚಿಗಳು** | | | |
| **ಪಿಹೆಚ್.ಡಿ. ವಿಭಾಗ** | | | |
| 8. | 2021–22.ವಿ.ಸಿಂ.02 ಪಿಹೆಚ್.ಡಿ.–01 | 2017ರ ಪಿಹೆಚ್.ಡಿ. ವಿನಿಯಮವನ್ನು ತಿದ್ದುಪಡಿ ಮಾಡುವ ಬಗ್ಗೆ. | ಸದರಿ ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ಸಭೆಯು ಪಿಹೆಚ್.ಡಿ. 2017ರ ವಿ–ನಿಯಮದಲ್ಲಿರುವ ಕೆಲವು ಅಸ್ಪಷ್ಟತೆಯ ಕುರಿತು ಪರಿಶೀಲಿಸಿ ತಿದ್ದುಪಡಿ ಮಾಡಲು ಡೀನರ ಸಮಿತಿಯನ್ನು ರಚಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಶಿಫಾರಸ್ಸನ್ನು ಹಾಗೂ 2017ರ ವಿ–ನಿಯಮದ Clause 5.5 ಗೆ ನೇರವಾಗಿ ಒಳಪಡುವ ಸಂಶೋಧನಾರ್ಥಿಗಳಿಗೆ 2017ರ ಪಿಹೆಚ್.ಡಿ. ವಿ–ನಿಯಮದ ತಿದ್ದುಪಡಿಯನ್ನು ಸರ್ಕಾರ ಅನುಮೋದಿಸುವ ಷರತ್ತಿಗೊಳಪಟ್ಟು ಸೇರಿದ ದಿನಾಂಕದಿಂದಲೇ ಖಾಯಂ ನೋಂದಣಿ ಸಂಖ್ಯೆಯನ್ನು ನೀಡಲು ಸಭೆಯು ನಿರ್ಧರಿಸಿರುವ ವಿದ್ಯಾವಿಷಯಕ ಪರಿಷತ್ತು ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br>ಮುಂದುವರೆದು, ಸದರಿ 2017 ಪಿಹೆಚ್.ಡಿ ವಿನಿಯಮದಲ್ಲಿನ ತಿದ್ದುಪಡಿಗಳ ಕುರಿತು ಕೂಲಂಕಷವಾಗಿ ಚರ್ಚಿಸಲು ಮುಂಬರುವ ಸಿಂಡಿಕೇಟ್ ಸಭೆಗೆ ಕಾರ್ಯಸೂಚಿಯನ್ನು ಮಂಡಿಸುವಂತೆ ಸಭೆಯು ತೀರ್ಮಾನಿಸಿತು. |
| **ಸಿಬ್ಬಂದಿ ವಿಭಾಗ** | | | |
| 9. | 2021–22.ವಿ.ಸಿಂ.02 ಸಿಬ್ಬಂದಿ–01 | ಪ್ರೊ. ಕೆ. ಶಿವಚಿತ್ತಪ್ಪ, ಮಾನ್ಯ ಕುಲಸಚಿವರು ಇವರ ವೈದ್ಯಕೀಯ ವೆಚ್ಚವನ್ನು ಮರುಭರಿಸಲು ಕೋರಿರುವ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು ಇವರು ಶಿಫಾರಸ್ಸು ಮಾಡಿರುವ ರೂ. 4,09,336–00 (ನಾಲ್ಕು ಲಕ್ಷದ ಒಂಬತ್ತು ಸಾವಿರದ ಮೂರುನೂರ ಮೂವತ್ತಾರು ರೂಪಾಯಿಗಳು ಮಾತ್ರ) ಗಳನ್ನು ಪ್ರೊ. ಕೆ. ಶಿವಚಿತ್ತಪ್ಪ, ಮಾನ್ಯ ಕುಲಸಚಿವರು ಇವರಿಗೆ ವೈದ್ಯಕೀಯ ವೆಚ್ಚವನ್ನು ಮರುಭರಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | |
|---|---|
| ತುಮಕೂರು ವಿಶ್ವವಿದ್ಯಾನಿಲಯದ ಗೀತೆ ರಚನೆ ಹಾಗೂ ಸಂಗೀತ ಸಂಯೋಜಿಸುವ ಕುರಿತು | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಈ ಸಂಬಂಧ ಶ್ರೀ ಲಕ್ಷ್ಮೀಕಾಂತ ಎಲ್.ವಿ. ರವರು ಗೀತೆ ರಚನೆ ಮಾಡಿ ಹಾಗೂ ಶ್ರೀ ರಾಘವ್ ಸುಭಾಷ್ ಇವರಿಂದ ಸಂಗೀತ ಸಂಯೋಜನೆ ಮಾಡಲ್ಪಟ್ಟಿರುವ ಹಾಡನ್ನು ಎಲ್ಲಾ ಸದಸ್ಯರುಗಳು ಆಲಿಸಿ ಈ ಕುರಿತು ಒಪ್ಪಿಗೆಯನ್ನು ಸೂಚಿಸಿದರು, ಮುಂದುವರೆದು, ಸದರಿ ಹಾಡನ್ನು ಪ್ರಸಿದ್ಧ ಗಾಯಕರಿಂದ ಗಾಯನ ಮಾಡಿಸುವಂತೆ ಹಾಗೂ ಈ ಕುರಿತು ವೆಚ್ಚವಾಗುವ ಮೊತ್ತವನ್ನು ಭರಿಸಲು ಸಭೆಯು ಸರ್ವಾನುಮತದಿಂದ ಅನುಮತಿಸಿತು. |

| | | | |
|---|---|---|---|
| ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. | | ಶ್ರೀ ಪ್ರಸನ್ನಕುಮಾರ್ | |
| ಶ್ರೀ ರಾಜು | | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ | |
| ಶ್ರೀ ಟಿ.ಡಿ. ವಿನಯ್ | | ಪ್ರೊ. ಪಾಟೀಲ್ ಮಲ್ಲಿಕಾರ್ಜುನ್.ಬಿ | |
| ಡಾ. ಕೆ ಸಿ ಜಯಸ್ವಾಮಿ | | ಕುಲಸಚಿವರು (ಪರೀಕ್ಷಾಂಗ) | |
| | | ಹಣಕಾಸು ಅಧಿಕಾರಿಗಳು | |

ಕುಲಸಚಿವರು

ಮಾನ್ಯ ಕುಲಪತಿಗಳು